KACM210024062022

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು**

**ದಿನಾಂಕ 12 ನೇ ಜೂನ್ ಮಾಹೆ 2026**

**: ಉಪಸ್ಥಿತರು :**

**ಶ್ರೀ ಡಿ ಕೆ ಮಂಜುನಾಥ ಚಾರಿ,**

**ಬಿ.ಎ. ಎಲ್ಎಲ್.ಬಿ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕಡೂರು**

ಸಿ.ಸಿ ಸಂಖ್ಯೆ 1666/2022

**ಫಿರ್ಯಾದುದಾರರು:** ಸರ್ಕಾರದ ಪರವಾಗಿ,
ಸಿಂಗಟಗೆರೆ ಪೋಲಿಸ್ ಠಾಣೆ

(**ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು**)

**ವಿರುದ್ಧ**

**ಆರೋಪಿ** : ರವಿ ಬಿನ್ ಚೆಲುವ ಮೂರ್ತಿ,
ವಯಸ್ಸು ಸುಮಾರು 41 ವರ್ಷ,
ಕೂಲಿ ಕೆಲಸ, ವಾಸಃ ಸೋಮನಹಳ್ಳಿ,
ಗ್ರಾಮ, ಸಿಂಗಟಗೆರೆ ಹೋಬಳಿ, ಕಡೂರು
ತಾಲ್ಲೂಕು.

(**ಪ್ರತಿನಿಧಿಸುವವರು ಶ್ರೀ. ಎನ್.ಎಸ್., ವಕೀಲರು**)

| | | |
|---|---|---|
| ಅಪರಾಧ ನಡೆದ ದಿನಾಂಕ | : | 29.01.2022 |
| ಅಪರಾಧ ವರದಿಯಾದ ದಿನಾಂಕ | : | 25.02.2022 |

KACM210024062022

| | | |
|---|---|---|
| ಫಿರ್ಯಾದುದಾರರ ಹೆಸರು | : | ಶ್ರೀಮತಿ. ಲೀಲಾವತಿ ಆರ್. |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 19.10.2023 |
| ತೀರ್ಪಿನ ದಿನಾಂಕ | : | 12.06.2026 |
| ಆರೋಪಿಸಲಾದ ದಂಡನೀಯ ಅಪರಾಧ | : | ಕರ್ನಾಟಕ ಅಬಕಾರಿ ಕಾಯಿದೆ ಕಲಂ 32 ಮತ್ತು 34 |
| ನ್ಯಾಯಾಧೀಶರ ಅಭಿಪ್ರಾಯ | : | ಕರ್ನಾಟಕ ಅಬಕಾರಿ ಕಾಯಿದೆ ಕಲಂ 32 ಮತ್ತು 34 ರ ರೀತ್ಯಾ ದಂಡನೀಯ ಅಪರಾಧಗಳ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ನಿರ್ದೋಷಿಯೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ. |
| ಸರ್ಕಾರದ ಪರವಾಗಿ | : | ಸಹಾಯಕ ಸರ್ಕಾರಿ ಅಭಿಯೋಜಕರು, ಕಡೂರು |
| ಆರೋಪಿ ಪರವಾಗಿ | : | ಶ್ರೀ. ಎನ್.ಎಸ್., ವಕೀಲರು |
| ಒಟ್ಟು | : | ವರ್ಷಗಳು ತಿಂಗಳು ದಿನಗಳು<br>04 04 13 |

D K MANJUNATHACHARI
Digitally signed by D K MANJUNATHACHARI
Date: 2026.06.12 11:05:41 +0530

**( ಡಿ. ಕೆ. ಮಂಜುನಾಥ ಚಾರಿ )**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು

KACM210024062022

: **ತೀರ್ಪು** :

ಕಡೂರು ಪೋಲಿಸರು ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯಿದೆ ಕಲಂ 32 ಮತ್ತು 34 ರ ರೀತ್ಯಾ ದಂಡನೀಯ ಅಪರಾಧಗಳಿಗಾಗಿ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನೆಯ ಪ್ರಕರಣದ ಸಾರಾಂಶ ಕೆಳಗಿನಂತೆ ಇದೆಃ

ದಿನಾಂಕ: 29.01.2022 ರಂದು ಸಂಜೆ 6−00 ಗಂಟೆ ಸಮಯದಲ್ಲಿ ಸಾಕ್ಷಿ−1 ರವರು ಇಲಾಖಾ ಜೀಪಿನಲ್ಲಿ ಸಿಬ್ಬಂದಿಗಳೊಂದಿಗೆ ಸೋಮನಹಳ್ಳಿ ತಾಂಡ್ಯದ ಬಳಿ ಗಸ್ತಿನಲ್ಲಿದ್ದಾಗ ಬಂದ ಖಚಿತ ವರ್ತಮಾನದ ಮೇರೆಗೆ ಸಾಕ್ಷಿ−1 ಮತ್ತು ಪೊಲೀಸ್ ಸಿಬ್ಬಂದಿಯಾದ ಚಾಸಾ−4 ರಿಂದ 6 ಹಾಗೂ ಪಂಚರಾದ ಸಾಕ್ಷಿ−2 ಮತ್ತು 3 ರವರುಗಳು ಇಲಾಖಾ ಜೀಪಿನಲ್ಲಿ ಕಡೂರು ತಾಲ್ಲೂಕು, ಸಿಂಗಟಗೆರೆ ಹೋಬಳಿ, ಸೋಮನಹಳ್ಳಿ ಗ್ರಾಮದಲ್ಲಿ ಆರೋಪಿಯು ಸೋಮನಹಳ್ಳಿ ಗ್ರಾಮದ ಗ್ರಾಮ ಪಂಚಾಯ್ತಿ ಮುಂದೆ ಇರುವ ಅರಳಿ ಮರದ ಕೆಳಗೆ ಒಂದು ಹಸಿರು ಹಳದಿ ಬಣ್ಣ ಮಿಶ್ರಿತ ಪ್ಲಾಸ್ಟಿಕ್ ಚೀಲದಲ್ಲಿದ್ದ ಸುಮಾರು.1615/− ರೂ. ಬೆಲೆಯ 90 ಎಂ.ಎಲ್ ನ 46 ರಾಜಾ ವಿಸ್ಕಿ ಮದ್ಯ ತುಂಬಿದ ಪ್ಯಾಕೆಟ್ ಗಳನ್ನು ಅಕ್ರಮವಾಗಿ ಕಾನೂನು ಬಾಹಿರವಾಗಿ ಯಾವುದೇ ಪರವಾನಗಿ ಇಲ್ಲದೇ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದು, ಆ ಮೂಲಕ ಕರ್ನಾಟಕ ಅಬಕಾರಿ

ಕಾಯಿದೆ ಕಲಂ 32 ಮತ್ತು 34 ರಂತೆ ದಂಡನೀಯವಾದ ಅಪರಾಧಗಳನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿದೆ.

**3.** ದೋಷಾರೋಪಣೆ ಪತ್ರವನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಮೇಲ್ಕಂಡ ಆರೋಪಿತನ ವಿರುದ್ಧ ಮೇಲ್ಕಂಡ ಕಲಂಗಳನ್ವಯ ಶಿಕ್ಷಾರ್ಹ ಕೃತ್ಯಗಳ ಬಗ್ಗೆ ಸಂಜ್ಞೇಯತೆ ತೆಗೆದುಕೊಂಡು ಆರೋಪಿಯ ವಿರುದ್ಧ ಸಮನ್ಸ್ ಜಾರಿ ಮಾಡಿದಾಗ, ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ನಂತರ ಆರೋಪಿಗೆ ದೋಷಾರೋಪಣೆ ಪತ್ರ ಹಾಗೂ ಅದಕ್ಕೆ ಲಗತ್ತಿಸಿರುವ ಎಲ್ಲಾ ದಾಖಲೆಗಳ ಪತ್ರಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ನೀಡಲಾಗಿದೆ. ನನ್ನ ಹಿಂದಿನ ಪೀಠಾಸೀನಾಧಿಕಾರಿಗಳು ಆರೋಪಿಯ ವಿರುದ್ಧ ಮೇಲ್ಕಂಡ ಕಲಂಗಳ ಆಪಾದನೆಯನ್ನು ರಚಿಸಿ ಸದರಿ ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಲಾಗಿ ಆರೋಪಿಯು ತಪ್ಪೊಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ.

**4.** ಅಭಿಯೋಜನೆಯು 5 ಜನ ಸಾಕ್ಷಿದಾರರನ್ನು ಪ್ರಾಸಾ–1 ರಿಂದ ಪ್ರಾಸಾ–5 ಎಂದು ವಿಚಾರಣೆಗೆ ಒಳಪಡಿಸಿ, ಹನ್ನೊಂದು ದಾಖಲೆಗಳನ್ನು ಹಾಜರು ಪಡಿಸಿದ್ದು, ಸದರಿ ದಾಖಲೆಗಳನ್ನು ನಿಪಿ–1 ರಿಂದ ನಿಪಿ–7 ಎಂದು ಗುರುತಿಸಲಾಯಿತು. ಅಭಿಯೋಜನೆಯ

ಪರವಾದ ಸಾಕ್ಷಿದಾರರ ಮುಖ್ಯ ವಿಚಾರಣೆ ಮುಕ್ತಾಯಾಗೊಂಡ ನಂತರ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313(1)(ಬಿ) ರಂತೆ ಅಭಿಯೋಜನೆ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ಕಂಡು ಬಂದಿರುವ ಆಪಾದನೆಯ ಭಾಗವನ್ನು ಆರೋಪಿಗೆ ಓದಿ ಹೇಳಲಾಗಿ ಆರೋಪಿಯು ಅದನ್ನು ನಿರಾಕರಿಸಿರುತ್ತಾರೆ ಮತ್ತು ತಮ್ಮ ಪರವಾಗಿ ಯಾವುದೇ ಸಾಕ್ಷ್ಯಾ ಇಲ್ಲವೆಂದು ನುಡಿದಿರುತ್ತಾರೆ.

**5.** ಪ್ರಕರಣದ ವಿಚಾರಣೆಯ ತರುವಾಯ ಉಭಯ ಪಕ್ಷಗಾರರ ವಾದವನ್ನು ಆಲಿಸಿ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ನ್ಯಾಯಾಲಯದ ನಿರ್ಣಯಕ್ಕೆ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

> **ಅಂಶ – 1 :** ದಿನಾಂಕಃ 29.01.2022 ರಂದು ಸಂಜೆ 6–00 ಗಂಟೆಗೆ, ಖಚಿತ ಮಾಹಿತಿಯ ಮೇರೆಗೆ ಕಡೂರು ಆರಕ್ಷಕ ಉಪ-ನಿರೀಕ್ಷಕರವರು ಕಡೂರು ಠಾಣಾಧಿಕಾರಿಗಳಾದ ಚಾಸಾ–1 ಶ್ರೀಮತಿ. ಲೀಲಾವತಿ ತಮ್ಮ ಸಿಬ್ಬಂದಿಯೊಂದಿಗೆ ಸೋಮನಹಳ್ಳಿ ಗ್ರಾಮಕ್ಕೆ ಧಾವಿಸಿ, ಆರೋಪಿಯು ಯಾವುದೇ ಪರವಾನಿಗೆ ಇಲ್ಲದೇ, ತನ್ನ ಅಂಗಡಿಯ ಬಳಿ 90 ಎಮ್.ಎಲ್ ನ ಮದ್ಯ ತುಂಬಿದ 46 ರಾಜಾ ವಿಸ್ಕಿ ಮದ್ಯ ಪೌಚುಗಳನ್ನು ಯಾವುದೆ ಪರವಾನಗಿ ಇಲ್ಲದೆ ಕಾನೂನುಬಾಹಿರವಾಗಿ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡಿದ್ದು, ಆ ಪ್ರಕಾರ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ

ಕಲಂ 32 ಮತ್ತು 34ರ ರಡಿಯಲ್ಲಿ ದಂಡಿಸಲ್ಪಡಬಹುದಾದ ಅಪರಾಧಗಳನ್ನು ಎಸಗಿರುತ್ತಾರೆಂಬುದನ್ನು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತುಪಡಿಸಿದೆಯೇ ?

**ಅಂಶ – 2** : ಆದೇಶ ಏನು?

6. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇದೆಃ

ಅಂಶ– 1 : ನಕಾರಾತ್ಮಕವಾಗಿ

ಅಂಶ– 2 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ.

:: **ಕಾರಣಗಳು** ::

7. **ಅಂಶ–1** : ದಿನಾಂಕ 29.01.2022 ರಂದು ಚಾಸಾ–1/ಪ್ರಾಸಾ–1 ರವರಾದ ಕಡೂರು ಪೋಲಿಸ್ ಠಾಣೆಯ ಆರಕ್ಷಕ ಉಪ–ನಿರೀಕ್ಷಕರವರು ಕಡೂರು ಠಾಣಾಧಿಕಾರಿಗಳಾದ ಚಾಸಾ–10/ಪ್ರಾಸಾ–4 ರವರಿಗೆ ನಿಪಿ–2 ರಂತೆ ನೀಡಿದ ವರದಿಯನ್ನು ಪಡೆದು ಠಾಣಾಧಿಕಾರಿಗಳು ಆರೋಪಿಯ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಿಸಿರುತ್ತಾರೆ. ಸದರಿ ನಿಪಿ–2 ವರದಿಯಲ್ಲಿರುವಂತೆ ಚಾಸಾ–1 ರವರು ತನ್ನ

ಸಿಬ್ಬಂದಿಗಳಾದ ಚಾಸಾ–4/ಪ್ರಾಸಾ–3, ಚಾಸಾ–5, ಚಾಸಾ–6 ಮತ್ತು ಜೀಪ್ ಚಾಲಕನಾದ ಚಾಸಾ–7 ನಟರಾಜ್ ವೈ.ಎನ್ ರವರೊಂದಿಗೆ ಹಾಗೂ ಪಂಚರಾದ ಚಾಸಾ–2 ಮತ್ತು 3 ರವರೊಂದಿಗೆ ಕಡೂರು ತಾಲ್ಲೂಕು, ಸಿಂಗಟಗೆರೆ ಹೋಬಳಿ, ಸೋಮನಹಳ್ಳಿ ಗ್ರಾಮದ ತನ್ನ ಅಂಗಡಿಯ ಮುಂದೆ ಹೋಗಿ ನೋಡಲಾಗಿ, ಆರೋಪಿಯು ಸಾರ್ವಜನಿಕರಿಗೆ ಮದ್ಯದ ಟೆಟ್ರಾ ಪ್ಯಾಕೇಟುಗಳನ್ನು ಮಾರಾಟ ಮಾಡಲು ನಿಂತಿದ್ದು, ಅಲ್ಲಿದ್ದ ಹಸಿರು ಮತ್ತು ಹಳದಿ ಬಣ್ಣ ಮಿಶ್ರಿತ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ, ಸದರಿ ಚೀಲದಲ್ಲಿ ಸುಮಾರು ರೂ.1,615/– ಬೆಲೆ ಬಾಳುವ 90 ಎಂ.ಎಲ್.ನ 46 ರಾಜಾ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪಾಕೇಟುಗಳು ಇರುವುದು ಕಂಡು ಬಂದಿರುತ್ತದೆ. ಆತನನ್ನು ವಿಚಾರಿಸಲಾಗಿ, ಸದರಿ ಮದ್ಯವನ್ನು ಮಾರಾಟ ಮಾಡಲು ಯಾವುದೇ ಪರವಾನಗಿ ಇಲ್ಲವೆಂದು ತಿಳಿಸಿರುತ್ತಾರೆಂದು ನಮೂದಿಸಲಾಗಿರುತ್ತದೆ.

**8.** ನಿಪಿ–3 ಪ್ರತಿಯನ್ನು ಪರಿಶೀಲಿಸಿದ್ದು, ಸದರಿ ಪ್ರತಿಯಲ್ಲಿ ಪಂಚರ ಸಮಕ್ಷಮ ಅಜಮಾಯಿಷಿ ಮಾಡಲಾಗಿರುತ್ತದೆ ಎಂದು ನಮೂದಾಗಿರುತ್ತದೆ. ಆದರೆ ನಿಪಿ–1 ಕೃತ್ಯ ನಡೆದ ಸ್ಥಳ ಪಂಚನಾಮೆ ಪ್ರತಿಯನ್ನು ಪರಿಶೀಲಿಸಲಾಗಿ ಪಂಚರಾಗಿ ಚಾಸಾ–2 ಮತ್ತು ಚಾಸಾ–3/ಪ್ರಾ.ಸಾ.3 ಪ್ರಸನ್ನ ರವರನ್ನು ಬರಮಾಡಿಕೊಂಡಿರುವುದಾಗಿ ನಮೂದಿಸಲಾಗಿರುತ್ತದೆ. ಹಾಗಾಗಿ ಸದರಿ ಚಾಸಾ–2 ಮತ್ತು 3 ರವರು ಘಟನೆಯ ಬಗ್ಗೆ

ಸಾಕ್ಷ್ಯ ನುಡಿಯಲು ಪ್ರಮುಖ ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದಾರೆ. ಅಭಿಯೋಜನೆಯು ಚಾಸಾ–3/ಪಿ.ಡಬ್ಲ್ಯು–2 ಪ್ರಸನ್ನ ರವರನ್ನು ವಿಚಾರಣೆಗೆ ಒಳಪಡಿಸಿದ್ದು, ಇವರು ನಿಪಿ–1 ಮತ್ತು 3 ಕ್ಕೆ ತಾನು ಹೊಲದಿಂದ ಬರುತ್ತಿದ್ದಾಗ ಪೋಲಿಸರು ಸಹಿ ಮಾಡಿ ಎಂದು ತಿಳಿಸಿದ ಕಾರಣಕ್ಕಾಗಿ ಸೋಮನಹಳ್ಳಿ ರಸ್ತೆಯಲ್ಲಿ ಸವು ಮಾಡಿರುವುದಾಗಿ ನುಡಿದಿರುತ್ತಾರೆ. ಆದರೆ ಇವರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿದ ನಂತರ ಪಾಟೀ ಸವಾಲಿಗೆ ಒಳಪಡಿಸಿದಾಗ, ದಿನಾಂಕ 29.01.2022 ರಂದು ಸಂಜೆ 7.00 ರಿಂದ 7.35 ರ ವರೆಗೆ ಚಾಸಾ–2 ಮತ್ತು ಚಾಸಾ 3 ರವರ ಸಮಕ್ಷಮ ಪೋಲಿಸರು ಆರೋಪಿಯ ಕಡೆಯಿಂದ 90 ಎಮ್.ಎಲ್ ನ 46 ರಾಜಾ ವಿಸ್ಕಿ ಮದ್ಯದ ಪಾಕೇಟುಗಳನ್ನು ಅಮಾನತುಪಡಿಸಿಕೊಂಡಿದ್ದಾರೆ ಎಂಬ ಸೂಚನೆಯನ್ನು ಸಂಪೂರ್ಣವಾಗಿ ತಳ್ಳಿಹಾಕಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಹಾಗಾಗಿ ಈ ಪ್ರಕರಣದಲ್ಲಿ ಘಟನೆಯು ಸೋಮನಹಳ್ಳಿ ಗ್ರಾಮದ ಬಳಿ ಹೃದಯ ಭಾಗದಲ್ಲಿ ನಡೆದಿದೆ ಎನ್ನಲಾಗಿದ್ದು, ಆದರೂ ಸಹ ತನಿಖಾಧಿಕಾರಿಗಳು ಸದರಿ ಗ್ರಾಮದ ಸ್ಥಳೀಯರನ್ನು ಪ್ರತ್ಯಕ್ಷ ಹಾಗೂ ಪಂಚನಾಮೆ ಸಾಕ್ಷಿಗಳನ್ನಾಗಿ ಬರಮಾಡಿಕೊಳ್ಳಲು ಮುಕ್ತ ಅವಕಾಶವಿದ್ದರೂ ಸಹ ಸದರಿಯವರನ್ನು ಸಾಕ್ಷಿಗಳಾಗಿ ಪರಿಗಣಿಸಿರುವುದಿಲ್ಲ. ಹಾಗಾಗಿ ಯಾವುದೇ ಪ್ರತ್ಯಕ್ಷ

ಸಾಕ್ಷಿದಾರರ ಸಾಕ್ಷ್ಯದ ಅನುಪಸ್ಥಿತಿಯಲ್ಲಿ ಆರೋಪಿಯೇ ಅಂದು ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದರು ಎಂದು ನಿರ್ಧರಿಸಲು ಬರುವುದಿಲ್ಲ.

**9.** ಅಂತಿಮ ವರದಿಯನ್ನು ಪರಿಶೀಲಿಸಿದಾಗ ಕಂಡುಬರುವುದೇನೆಂದರೆ, ಚಾಸಾ–1/ಪ್ರಾಸಾ–1 ರವರು ಪೋಲಿಸ್ ತನಿಖಾಧಿಕಾರಿಗಳಾಗಿದ್ದು, ಆರೋಪಿಯ ಬಳಿ ದಾಳಿ ಮಾಡಿ ಆತನಿಂದ ಟೆಟ್ರಾ ಪಾಕೇಟುಗಳನ್ನು ವಶಪಡಿಸಿಕೊಳ್ಳಲು ನ್ಯಾಯಾಲಯದ ಒಪ್ಪಿಗೆಯನ್ನು ಪಡೆಯಬೇಕಾಗಿತ್ತು, ಆದರೆ ಈ ಬಗ್ಗೆ ಚಾಸಾ–1/ಪ್ರಾ.ಸಾ–1 ರವರು ಆರೋಪಿಯ ಮೇಲೆ ದಾಳಿ ಮಾಡಿದ ಸಮಯದಲ್ಲಿ ಘನ ನ್ಯಾಯಾಲಯದಿಂದ ಆದೇಶವನ್ನು ಪಡೆದಿರುವ ಬಗ್ಗೆ ಅಂತಿಮ ವರದಿಯಲ್ಲಿ ಉಲ್ಲೇಖಿಸಿರುವುದಿಲ್ಲ. ಒಂದು ವೇಳೆ ಆರೋಪಿಯ ಮೇಲೆ ದಾಳಿ ಮಾಡಲು ನ್ಯಾಯಾಲಯದಿಂದ ಒಪ್ಪಿಗೆ ಪಡೆಯಲು ಸಾಧ್ಯವಾಗದ ತುರ್ತು ಸಂದರ್ಭಗಳಿದ್ದಲ್ಲಿ ಆ ಕಾರಣಗಳನ್ನು ತನಿಖಾಧಿಕಾರಿಯು ಕಡ್ಡಾಯವಾಗಿ ಉಲ್ಲೇಖಿಸಬೇಕಾಗಿರುತ್ತದೆ. ಘನ ಕರ್ನಾಟಕ ಉಚ್ಚ ನ್ಯಾಯಾಲಯವು ಬಾಬು ನಾಯಕ್ ವಿರುದ್ಧ ಕರ್ನಾಟಕ ರಾಜ್ಯ, ಈ ಪ್ರಕರಣದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿದ್ದು....

*While Section 53 relates to a contingency where the Statute enjoins that any Inspector*

*before searching a place must obtain a warrant from a Magistrate, Section 54 is a special provision which arises in urgent cases where it may not be possible for the office to obtain a warrant from the Magistrate. When such is the situation, in the present case on hand though the search warrant which is mandatory was not obtained in accordance with Section 53 of the Excise Act, the Officer concerned should have recorded the grounds of his belief in writing and should have proceeded to conduct the raid as per the provisions of Section 54 of the Excise Act. The judgment of the Apex Court relied by the learned counsel for the petitioner in K.L. Subhayya (supra) is thus squarely applicable to the facts of this case.*

*The further circumstance that goes against the case of the prosecution is that the eye witnesses to the seizure mahazar PW-4 / Ravindra Rai and PW-5 / Babu P have turned*

*hostile and have not supported the case of the prosecution. Hence, the reliability of Exhibit P1 Seizure mahazar has become shaky. Thus, the Trial Court has proceeded to convict the petitioners based on the evidence of PWs 1 to 3 and 7, official witnesses, who are all interested witnesses. All of them being interested witnesses to the case of the prosecution, the Trial Court has erred in convicting the petitioners based on their evidence.*

*The prosecution has failed to examine the Chemical Examiner who examined the contents of the sachets and issued the chemical analysis report as per Exhibit P6 and hence the non-examination of the analyst has also rendered fatal to the case of the prosecution. In view of all these reasons, I am of the opinion that the judgment of conviction and order of sentence rendered by the Trial*

*Court which has further been affirmed by the Appellate Court, requires to be set aside.*

10. ತನಿಖಾಧಿಕಾರಿಯು ಸ್ಥಳವನ್ನು ಶೋಧನೆ ಮಾಡಲು ನ್ಯಾಯಿಕ ದಂಡಾಧಿಕಾರಿಯಿಂದ ಅಧಿಕಾರ ಪತ್ರವನ್ನು ಪಡೆಯಬೇಕಾಗಿದ್ದು, ಇಲ್ಲದಿದ್ದರೆ ಯಾವ ಕಾರಣಕ್ಕೆ ನ್ಯಾಯಿಕ ದಂಡಾಧಿಕಾರಿಗಳಿಂದ ಸ್ಥಳ ಶೋಧನೆ ಮಾಡಲು ಅಧಿಕಾರ ಪತ್ರವನ್ನು ಪಡೆಯಲಿಲ್ಲ ಎಂಬುದನ್ನು ವಿವರಿಸಬೇಕಾಗಿರುತ್ತದೆ. ಕೇವಲ ತನಿಖಾಧಿಕಾರಿ ಹಾಗೂ ಪ್ರಕರಣದಲ್ಲಿ ಹಿತಾಸಕ್ತಿಯುಳ್ಳ ಸಾಕ್ಷಿಗಳ ಸಾಕ್ಷ್ಯದಿಂದ ಆರೋಪಿಯನ್ನು ದಂಡಿಸಲು ಬರುವುದಿಲ್ಲ. ಅಭಿಯೋಜನೆಯು ರಾಸಾಯನಿಕ ತಜ್ಞರನ್ನು ಟೆಟ್ರಾ ಪಾಕೇಟ್‌ಗಳನ್ನು ಪರೀಕ್ಷಿಸಿದ ಬಗ್ಗೆ ವಿಚಾರಣೆಗೆ ಒಳಪಡಿಸಬೇಕಾಗಿರುತ್ತದೆ, ಇಲ್ಲದಿದ್ದರೆ ಅದು ಅಭಿಯೋಜನೆಗೆ ಮಾರಕವಾಗಿರುತ್ತದೆ ಎಂದು ಘನ ನ್ಯಾಯಾಲಯವು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆದುದರಿಂದ ಈ ಪ್ರಕರಣದಲ್ಲಿ ಸಹ ಅಭಿಯೋಜನೆಯು ಟೆಟ್ರಾ ಪಾಕೇಟ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ ಸಾಕ್ಷಿಗಳನ್ನು ಅಥವಾ ತಜ್ಞರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ. ಕೇವಲ ತನಿಖಾಧಿಕಾರಿಗಳು ಹಾಗೂ ಪ್ರಕರಣದಲ್ಲಿ ಹಿತಾಸಕ್ತಿ ಹೊಂದಿದ ಪೋಲಿಸರ ಹೇಳಿಕೆಯ ಆಧಾರದ ಮೇಲೆ ಆರೋಪಿಯನ್ನು ದಂಡಿಸುವುದು ಕ್ರಮಬದ್ಧವಾಗಿರುವುದಿಲ್ಲ.

11. ಫ್ರಾಸಾ–1 ರಿಂದ 5 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಅವರು ನೀಡಿದ ಸಾಕ್ಷ್ಯದಂತೆ ಹಾಗೂ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲಾತಿ ಸಾಕ್ಷ್ಯಕ್ಕೆ ಅನುಗುಣವಾಗಿ ಫ್ರಾಸಾ–1 ರಿಂದ 5 ರವರು ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾಗಿದ್ದು ಅಭಿಯೋಜನೆಗೆ ಸಹಾಯವಾಗುವಂತಹ ಸಾಕ್ಷ್ಯ ನುಡಿದಿರುವುದಿಲ್ಲ. ಬದಲಾಗಿ ಅಭಿಯೋಜನೆಗೆ ವಿಭಿನ್ನವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದಕಾರಣ ಆರೋಪಿಯ ವಿರುದ್ಧ ಮಾಡಲಾದ ಆರೋಪವು ರುಜುವಾತಾಗುವುದಿಲ್ಲ.

12. ಅಭಿಯೋಜನೆಯು ಹಾಜರುಪಡಿಸಿದಂತಹ ಸಾಕ್ಷ್ಯಗಳು ಮತ್ತು ದಾಖಲಾತಿ ಸಾಕ್ಷ್ಯವನ್ನು ಸಮಗ್ರವಾಗಿ ಗಮನಿಸಿದಾಗ ಆರೋಪಿಯ ವಿರುದ್ಧ ಆಪಾದನೆ ಮಾಡಲಾದ ಅಪರಾಧಗಳನ್ನು ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುವುದು ಸ್ಪಷ್ಟವಾಗುತ್ತದೆ. ಆದಕಾರಣ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಅಂಶ–1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

13. **ಅಂಶ–2** : ಈ ಮೇಲಿನ ಅಂಶ–1 ರಲ್ಲಿ ಚರ್ಚಿಸಲಾದಂತೆ ಈ ಕೆಳಕಂಡ........

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರದಿಂದ ಆರೋಪಿ ವಿರುದ್ದ ಮಾಡಲಾದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 32 ಮತ್ತು 34 ರಡಿಯಲ್ಲಿನ ದಂಡನೀಯ ಅಪರಾಧಗಳ ಆರೋಪದಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆಗೆ ಆದೇಶಿಸಲಾಗಿದೆ.

ಆರೋಪಿತ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರವು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಪ್ರಕಾರ ಆರು ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು.

ಮುದ್ದೆಮಾಲು 1: 90 ಎಂ.ಎಲ್.ನ ಮದ್ಯ ತುಂಬಿದ 46 ರಾಜಾವಿಸ್ಕಿ ಪೌಚು, 2.ಒಂದು ಹಸಿರು ಮತ್ತು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲ ಇವುಗಳು ಬೆಲೆ ಬಾಳದ ವಸ್ತುವಾಗಿರುವ ಕಾರಣ ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಬೆರಳಚ್ಚುಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ನಂತರ ಈ ದಿನ ಅಂದರೆ ದಿನಾಂಕ 12.02.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ )

D K MANJUNATHACHARI

Digitally signed by D K MANJUNATHACHARI
Date: 2026.06.12 11:05:55 +0530

**(ಡಿ ಕೆ ಮಂಜುನಾಥ ಚಾರಿ)**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು

: **ಅನುಬಂಧ** :

1) **ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:**

| | | |
|---|---|---|
| ಫ್ರಾಸಾ–1 | : | ಲೀಲಾವತಿ, |
| ಫ್ರಾಸಾ–2 | : | ಪ್ರಸನ್ನ, |
| ಫ್ರಾಸಾ–3 | : | ಡಿ.ಎಸ್.ಗೋವಿಂದ ಸ್ವಾಮಿ., |
| ಫ್ರಾಸಾ–4 | : | ಆರ್.ಮಂಜನಾಯ್ಕ, |
| ಫ್ರಾಸಾ–5 | : | ಪವಿತ್ರ ಜಿ.ಕೆ. |

2) **ಅಭಿಯೋಜನೆ ಪರ ಗುತಿರ್ಸಿದ ದಾಖಲಾತಿಗಳು :**

| | | |
|---|---|---|
| ನಿಪಿ–1 | : | ನೋಟೀಸ್ |
| ನಿಪಿ–1 (ಎ) | : | ಸಾಕ್ಷಿ ಸಹಿ, |
| ನಿಪಿ–2 | : | ದೂರು |
| ನಿಪಿ–2 (ಎ)–(ಬಿ) | : | ಸಾಕ್ಷಿಗಳ ಸಹಿ |
| ನಿಪಿ–3 | : | ಮಹಜರ್ |
| ನಿಪಿ–3 (ಎ)–(ಬಿ) | : | ಸಾಕ್ಷಿಗಳ ಸಹಿ |
| ನಿಪಿ–4 | : | ಛಾಯಚಿತ್ರ |
| ನಿಪಿ–5 | : | ಪ್ರಥಮ ವರ್ತಮಾನ ವರದಿ |
| ನಿಪಿ–5 (ಎ) | : | ಸಾಕ್ಷಿ ಸಹಿ |
| ನಿಪಿ–6 | : | ಸೂಚನಾ ಪತ್ರ |
| ನಿಪಿ–6 (ಎ) | : | ಸಾಕ್ಷಿ ಸಹಿ |
| ನಿಪಿ–7 | : | ರಾಸಾಯನಿಕ ವಿಶ್ಲೇಷಣಾ ವರದಿ |

ನಿಪಿ–7 (ಎ) : ಸಾಕ್ಷಿ ಸಹಿ

**3) ಆರೋಪಿಯ ಪರ ಯಾವುದೇ ಸಾಕ್ಷಿ ಮತ್ತು ದಾಖಲೆಗಳು : ಇರುವುದಿಲ್ಲ**

**4) ಮುದ್ದೆ ಮಾಲುಗಳ ಪಟ್ಟಿ** :
1. 90 ಎಂ.ಎಲ್.ನ 46 ರಾಜಾವಿಸ್ಕಿ ಪೌಚು,
2. ಒಂದು ಹಸಿರು ಮತ್ತು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲ.

D K MANJUNATHACHARI Digitally signed by D K MANJUNATHACHARI Date: 2026.06.12 11:06:04 +0530

**(ಡಿ ಕೆ ಮಂಜುನಾಥ ಚಾರಿ)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು

Visit **ecourts.gov.in** for updates or download mobile app "**eCourts Services**" from Android or iOS